**ಆರ್.ಬಿ.ಐ / 2007–08 / 27**
**ಆರ್.ಪಿ.ಸಿ.ಡಿ ನಂ. ಎಸ್‌ಪಿ.ಬಿಸಿ 02/09.03.01/2007–08**

ಜುಲೈ 2, 2007

ಅಧ್ಯಕ್ಷರು / ವ್ಯವಸ್ಥಾಪಕ ನಿರ್ದೇಶಕರು
ಎಲ್ಲ ಖಾಸಗಿ ವಲಯ ಬ್ಯಾಂಕುಗಳು

ಮಾನ್ಯರೆ

**ಆದ್ಯತಾ ವಲಯ ಸಾಲ ನೀಡಿಕೆ – ಪ್ರಧಾನ ಸುತ್ತೋಲೆ – ಜಾಡಮಾಲಿಗಳ ವಿಮೋಚನೆ ಮತ್ತು ಪುನರ್ವಸತಿ (ಎಸ್.ಎಲ್.ಆರ್.ಎಸ್)– ವಿಶೇಷ ಕಾರ್ಯಕ್ರಮಗಳು**

ಜಾಡಮಾಲಿಗಳ ವಿಮೋಚನೆ ಮತ್ತು ಪುನರ್ವಸತಿ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ, ಭಾರತೀಯ ರಿಸರ್ವ್ ಬ್ಯಾಂಕು, ಬ್ಯಾಂಕುಗಳಿಗೆ ನಿರ್ದೇಶನ / ಸೂಚನೆಗಳನ್ನು ಆಗಾಗ ನೀಡುತ್ತ ಬಂದಿದೆ. ಪ್ರಚಲಿತ ಸೂಚನೆಗಳನ್ನು ಬ್ಯಾಂಕುಗಳು ಒಂದೇ ಸೂರಿನಡಿ ಸಿಗುವಂತಾಗಲು ಮೇಲ್ಕಂಡ ವಿಷಯದ ಕುರಿತು ಒಂದು ಪ್ರಧಾನ ಸುತ್ತೋಲೆಯನ್ನು ಸಿದ್ಧ ಪಡಿಸಿ, ಈಗಿರುವ ಮಾರ್ಗಸೂಚಿ / ಸೂಚನೆ / ಆದೇಶಗಳನ್ನೆಲ್ಲ ಒಗ್ಗೂಡಿಸಿ ಲಗತ್ತಿಸಲಾಗಿದೆ. ಈ ಪ್ರಧಾನ ಸುತ್ತೋಲೆಯನ್ನು ಪರಿಷ್ಕರಿಸಲಾಗಿದೆ ಮತ್ತು ವಿಷಯದ ಬಗ್ಗೆ ಈ ವರೆಗೆ ಭಾರತೀಯ ರಿಸರ್ವ್ ಬ್ಯಾಂಕ್ ನೀಡಿದ ಎಲ್ಲ ಸೂಚನೆಗಳನ್ನು ಅನುಬಂಧ IV ರಲ್ಲಿ ಕ್ರೋಢೀಕರಿಸಿ ನೀಡಲಾಗಿದೆ.

ದಯವಿಟ್ಟು ಸ್ವೀಕೃತಿ ನೀಡಿ

ತಮ್ಮ ವಿಶ್ವಾಸಿ

**ಜಿ. ಶ್ರೀನಿವಾಸನ್**
**(ಮುಖ್ಯ ಮಹಾ ವ್ಯವಸ್ಥಾಪಕರು)**

---


1. **ಯೋಜನೆ**
2. **ಯೋಜನೆಯ ಪ್ರಮುಖ ಲಕ್ಷಣಗಳು**
3. **ಬ್ಯಾಂಕುಗಳ ಪಾತ್ರ**
4. **ಕಾರ್ಯಗತಗೊಳಿಸುವ ಏಜೆನ್ಸಿಗಳು**
5. **ನಿಗಾವಹಿಸುವಿಕೆ ಮತ್ತು ಮೌಲ್ಯಮಾಪನ**

**ಅನುಬಂಧ I ವ್ಯವಹಾರಗಳ ಪಟ್ಟಿ**
**ಅನುಬಂಧ II ಕೇಂದ್ರೀಯ ನಿಗಾ ಸಮಿತಿ ಸಂಯೋಜನೆ**
**ಅನುಬಂಧ III ಮಾಸಿಕ ಎಸ್.ಎಲ್.ಆರ್.ಎಸ್ ಪ್ರಗತಿ ಪತ್ರ**
**ಅನುಬಂಧ IV ಕ್ರೋಢೀಕರಿಸಲಾದ ಸುತ್ತೋಲೆಗಳ ಪಟ್ಟಿ**

**ಜಾಡಮಾಲಿಗಳ ವಿಮೋಚನೆ ಮತ್ತು ಪುನರ್ವಸತಿ ಯೋಜನೆ (ಎಸ್.ಎಲ್.ಆರ್.ಎಸ್)**

ಜಾಡಮಾಲಿಗಳು ಮತ್ತು ಅವರ ಆಶ್ರಿತರಿಗೆ ಭಾರತ ಸರ್ಕಾರ ಮಾರ್ಚ್ 22, 1992 ರಂದು ರಾಷ್ಟ್ರೀಯ ಪುನರ್ವಸತಿ ಯೋಜನೆಯೊಂದನ್ನು ಆರಂಭಿಸಿದೆ. ಈ ಯೋಜನೆಯ ವಿವರಗಳು ಹಾಗು ಇದನ್ನು ಸಂಪೂರ್ಣ ಕಾರ್ಯಗತಗೊಳಿಸಲು ಬ್ಯಾಂಕುಗಳು ಅನುಸರಿಸಬೇಕಾದ ಮಾರ್ಗಸೂಚಿಯ ಬಗ್ಗೆ ಎಲ್ಲ ಖಾಸಗಿ ವಲಯ ಬ್ಯಾಂಕುಗಳಿಗೆ ಆರ್.ಬಿ.ಐ. ಆರ್.ಪಿ.ಸಿ.ಡಿ ಎಸ್‌ಪಿ.ಬಿಸಿ 84 / ಸಿ 665 (ಎಸ್.ಆರ್.ಎಸ್) 92 /93 ದಿನಾಂಕ ಮಾರ್ಚ್ 20, 1993ರಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಿದೆ.

**1. ಯೋಜನೆ**

1.1 ಪ್ರಸಕ್ತ ಚಾಲ್ತಿಯಿರುವ ಕೈಯಿಂದ ಮಲ ಮತ್ತು ಕೊಳೆ ತೆಗೆಯುವ ವಂಶಪಾರಂಪರ್ಯ ಹಾಗು ಅನಿಷ್ಟ ವೃತ್ತಿಯಿಂದ ಜಾಡಮಾಲಿಗಳನ್ನು ಮತ್ತು ಅವರ ಆಶ್ರಿತರನ್ನು ವಿಮೋಚನೆಗೊಳಿಸಿ ಅವರಿಗೆ ಬೇರೆ ಗೌರವಾನ್ವಿತ ಕೆಲಸವನ್ನು ಐದುವರ್ಷಗಳೊಳಗೆ ಒದಗಿಸುವ ಉದ್ದೇಶ ಈ ಯೋಜನೆಯದಾಗಿದೆ.

1.2 ಒಣಶೌಚಾಲಯಗಳನ್ನು ನೀರು ತುಂಬಿದ ಫ್ಲಷ್ ಶೌಚಾಲಯಗಳನ್ನಗಿ ಪರಿವರ್ತಿಸುವ ಮೂಲಕ ಜಾಡಮಾಲಿಗಳನ್ನು ಅನಿಷ್ಟ ವೃತ್ತಿಯಿಂದ ವಿಮೋಚನೆಗೊಳಿಸುವುದನ್ನು ನಗರಾಭಿವೃದ್ಧಿ ಸಚಿವಾಲಯ ಕಾರ್ಯಗತಗೊಳಿಸುತ್ತದೆ, ಅಲ್ಲದೇ ಕ್ಷೇಮಾಭಿವೃದ್ಧಿ ಸಚಿವಾಲಯ ಈ ಯೋಜನೆಯನ್ವಯ ಪುನರ್ವಸತಿ ಕಲ್ಪಿಸುತ್ತದೆ.

1.3 ಕೈಯಿಂದ ಮಲ ಮತ್ತು ಕೊಳೆ ತೆಗೆಯುವ ಅನಿಷ್ಟ ಹಾಗು ಅಮಾನವೀಯ ವೃತ್ತಿಯಲ್ಲಿ ಅರ್ಧ ಅಥವಾ ಪೂರ್ತಿತೊಡಗಿಸಿಕೊಂಡಿರುವವರೇ ಜಾಡಮಾಲಿಗಳು. ಸಂಪೂರ್ಣ ಅಥವಾ ಭಾಗಶಃ ಈ ವೃತ್ತಿಯಲ್ಲಿ ನಿರತನಾಗಿರುವ ಜಾಡಮಾಲಿಯ ಕುಟುಂಬದ ಸದಸ್ಯ / ಸದಸ್ಯೆ ಅಥವಾ ಅವನ / ಅವಳಮೇಲೆ ಅವಲಂಬಿತರು ಜಾಡಮಾಲಿಗಳ ಆಶ್ರಯಿಸಿರುವವರಾಗಿರುತ್ತಾರೆ.

1.4 ಮೂಲಭೂತವಾಗಿ ಈ ಯೋಜನೆ ಪರಿಶಿಷ್ಟ ಜಾತಿಯ ಎಲ್ಲ ಜಾಡಮಾಲಿಗಳು ಮತ್ತು ಒಣ ಪಾಯಿಖಾನೆ ಸ್ವಚ್ಛ ಮಾಡುವ ಬೇರೆ ಪಂಗಡದ ಜಾಡಮಾಲಿಗಳು, ಕೈಯಿಂದ ಮಲ ತೆಗೆಯುವ ಆಚರಣೆಯನ್ನು ನಿರ್ಮೂಲ ಮಾಡುವುದೇ ಆಗಿದೆ. ಒಣ ಪಾಯಿಖಾನೆ ಸ್ವಚ್ಛ ಮಾಡುವವರಲ್ಲದ ಇತರ ಸ್ವಚ್ಛತಾ ಕೆಲಸದಲ್ಲಿ ನಿರತ ವ್ಯಕ್ತಿಗಳಿಗೆ ಈ ಯೋಜನೆಯ ಪ್ರಯೋಜನ ದೊರಕುವುದಿಲ್ಲ.

1.5 ಕುಟುಂಬದ ಗಂಡಸರು ಹೆಚ್ಚು ಗೌರವಾನ್ವಿತ ಕೆಲಸಗಳಿಗೆ ಬದಲಾವಣೆ ಪಡೆದುಕೊಂಡ ನಂತರ ಕೈಯಿಂದ ಮಲ ತೆಗೆಯುವ ವೃತ್ತಿಯನ್ನು ಕೈಗೊಂಡ ಕೆಲಸಗಾರರ ಪೈಕಿ ಮಹಿಳೆಯರು ಹೆಚ್ಚಿನ ಸಂಖ್ಯೆಯವರಾಗಿರುತ್ತಾರೆ.

1.6 ಈ ಯೋಜನೆಯು ಕೆಳಕಂಡ ಅಂಶಗಳನ್ನು ಒಳಗೊಂಡಿದೆ :

i. ಜಾಡಮಾಲಿಗಳು ಮತ್ತು ಅವರ ಆಶ್ರಯಿಸಿರುವವರನ್ನು ಹಾಗೂ ಪರ್ಯಾಯ ವೃತ್ತಿಯಲ್ಲಿ ಅವರಿಗೆ ಇರುವ ಒಲವನ್ನು ಗುರುತಿಸಲು ಕಾಲಮಿತಿ ಕಾರ್ಯಕ್ರಮ
ii. ಗುರುತಿಸಿಕೊಂಡ ವ್ಯವಹಾರಗಳಲ್ಲಿ ಸರ್ಕಾರಿ ತರಬೇತಿ ಸಂಸ್ಥೆಗಳಲ್ಲಿ ಜಾಡಮಾಲಿಗಳು ಮತ್ತು ಅವರ ಆಶ್ರಿತರಿಗೆ ತರಬೇತಿ ನೀಡುವುದು.
iii. ಬೇರೆ ವ್ಯವಹಾರಗಳನ್ನು ನಡೆಸಲು, ಧನ ಸಹಾಯ ನೀಡುವ ಮೂಲಕ ಜಾಡಮಾಲಿಗಳಿಗೆ ಪುನರ್ವಸತಿ ನಿರ್ಮಿಸುವುದು.

**2. ಪ್ರಮುಖ ಲಕ್ಷಣಗಳು**

2.1 ಜಾಡಮಾಲಿಗಳ ವಿಮೋಚನೆ ಮತ್ತು ಪುನರ್ವಸತಿ ರಾಷ್ಟ್ರೀಯ ಯೋಜನೆ ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಅನ್ವಯಿಸುತ್ತದೆ.

2.2 ಈ ಯೋಜನೆಯು ನಗರ ಪ್ರದೇಶ, ಅರೆನಗರ ಪ್ರದೇಶ, ಗ್ರಾಮೀಣ ಪ್ರದೇಶ ಅಥವಾ ದಂಡುಪ್ರದೇಶದ ಕ್ಷೇತ್ರಗಳನ್ನೊಳಗೊಂಡ ಬೇರೆ ಪಟ್ಟಣಗಳು, ಸಾರ್ವಜನಿಕ ವಲಯ ಉದ್ದಿಮೆಗಳ ಕಾಲೋನಿಗಳು ಮುಂತಾದ ಕಡೆ ಕೈಯಿಂದ ಮಲ ತೆಗೆಯುವ ಜಾಡಮಾಲಿಗಳಿಗೆ ಈ ಯೋಜನೆ ಅನ್ವಯಿಸುತ್ತದೆ.

2.3 ಈ ಯೋಜನೆಯಲ್ಲಿ 'ಘಟಕ' ಎಂದರೆ ಇಡೀ ಕುಟುಂಬವಲ್ಲ; ಆದರೆ ಪ್ರತಿಯೊಬ್ಬ ಜಾಡಮಾಲಿ ಮತ್ತು ಜಾಡಮಾಲಿಯ ಆಶ್ರಿತ, ಧನಸಹಾಯಕ್ಕೆ ಅರ್ಹರು.

2.4 ಅಪ್ರಾಪ್ತ ವಯಸ್ಸಿನವರಿಗೆ ಸಾಲವನ್ನು ನೀಡುವುದು ಅವರಿಗೆ ಶಾಲೆಗೆ ಹೋಗುವುದನ್ನು ನಿರುತ್ತೇಜನಗೊಳಿಸುವುದರಿಂದ ಈ ಯೋಜನೆಯನ್ನು ಜಾರಿಗೆ ತರುವ ಏಜೆನ್ಸಿಗಳು 18 ವರ್ಷ ಮೇಲ್ಪಟ್ಟ ವಯಸ್ಸಿನವರನ್ನು ಸಹಾಯಕ್ಕಾಗಿ ಪ್ರಾಯೋಜಿಸಬೇಕು.

2.5 ನಾನಾ ವಿಧದ ವ್ಯಾಪಾರಗಳಲ್ಲಿ ತರಬೇತಿ ನೀಡಲು 18–50 ವರ್ಷದ ವಯೋಮಿತಿ ಇರುತ್ತದೆ.

2.6 ಜಾಡಮಾಲಿಗಳಿಗೆ ತರಬೇತಿ ನೀಡಲು ಯಾವ ಕನಿಷ್ಟ ವಿದ್ಯಾರ್ಹತೆಯನ್ನು ನಿಗದಿಪಡಿಸಲಾಗಿಲ್ಲ.

2.7 ಭಾರತ ಸರ್ಕಾರ, ರಾಜ್ಯ ಸರ್ಕಾರಗಳು / ಕೇಂದ್ರಾಡಳಿತಗಳು ಸ್ಥಾಪಿಸಿದ ತರಬೇತಿ ಸಂಸ್ಥೆಗಳಲ್ಲಿ ಖಾಸಗಿ ಜಾಡಮಾಲಿಗಳಿಗೆ, ಸ್ಥಳೀಯ ಏಜೆನ್ಸಿಗಳಲ್ಲಿ ಕೆಲಸ ಮಾಡುತ್ತಿರುವ ಆಶ್ರಿತರನ್ನು ಒಳಗೊಂಡಂತೆ, ಅವರ ಆಶ್ರಿತರಿಗೆ, ಅವರ ಒಲವು ಹಾಗು ಸ್ಥಳೀಯ ಅಗತ್ಯ ಮತ್ತು ವಾತಾವರಣವನ್ನು ಗಮನಿಸಿ ಸೂಕ್ತ ಗುರುತಿಸಲ್ಪಟ್ಟ ಕಸುಬುಗಳಲ್ಲಿ ಪುನರ್ವಸತಿ ತರಬೇತಿಯನ್ನು ನೀಡಬೇಕು.

2.8 ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬೇರೆ ಬೇರೆ ವಿಭಾಗಗಳು ನಡೆಸುತ್ತಿರುವ ತರಬೇತಿ ಸಂಸ್ಥೆಗಳಲ್ಲಿ ನೀಡುವ ಪುನರ್ವಸತಿ ತರಬೇತಿಗಳು ಒಂದು ತಿಂಗಳಿಂದ ಆರು ತಿಂಗಳ ಅವಧಿಯದಾಗಿರುತ್ತದೆ.

2.9 ತರಬೇತಿಯ ಸಂಪೂರ್ಣ ಖರ್ಚನ್ನು ಕೇಂದ್ರ ಸರ್ಕಾರ ಭರಿಸುತ್ತದೆ.

2.10 ಜಾಡಮಾಲಿಗಳು ಮತ್ತು ಅವರ ಆಶ್ರಿತರಿಗೆ ಅವರ ಅಭಿರುಚಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಗುರುತಿಸಿದ ಕಸುಬುಗಳ ಒಂದು ಯಾದಿಯನ್ನು ಅನುಬಂಧ I ರಲ್ಲಿ ನೀಡಲಾಗಿದೆ.

2.11 ಈ ಯೋಜನೆಯಡಿ ಜಾಡಮಾಲಿಗಳಿಗೆ ಬ್ಯಾಂಕುಗಳು ನೀಡಿದ ಸಾಲವು ಆದ್ಯತಾ ವಲಯದ ಸಾಲವಾಗಿ ಪರಿಗಣಿಸಲ್ಪಡುತ್ತದೆ ಮತ್ತು ರೂ. 6500/– ವರೆಗಿನ ಸಾಲ ವಿಭಿನ್ನ ಬಡ್ಡಿ ದರಗಳ ಸಾಲ ಯೋಜನೆಯಲ್ಲಿ ಪರಿಗಣಿಸಲ್ಪಡುತ್ತದೆ.

**2.12 ನಿಧಿ ಕಲ್ಪಿಸುವುದು**

2.12.1 ಪ್ರತಿ ಫಲಾನುಭವಿಗೆ ಶೇಕಡ 4ರಷ್ಟು ಬಡ್ಡಿದರದಲ್ಲಿ ರೂ. 50000/– ವರೆಗಿನ ಯೋಜನೆಗಳ ಯೋಜನ ವೆಚ್ಚ ಹಾಗು ಮಾರ್ಜಿನ್ ಹಣವಾಗಿ ಶೇಕಡ 15ರಷ್ಟು ಯೋಜನಾ ವೆಚ್ಚವನ್ನು ಈ ಯೋಜನೆಯು ಒದಗಿಸುತ್ತದೆ.

2.12.2 ರೂ. 50,000/– ಯೋಜನಾ ವೆಚ್ಚದ ಯೋಜನೆಯ ವಿಂಗಡಣೆಯು – ರೂ. 10000/– ಸಹಾಯ ಧನ, ರೂ. 7,500/– ರಾಜ್ಯ ಪರಿಶಿಷ್ಟ ಜಾತಿ ಅಭಿವೃದ್ಧಿ ಮಂಡಳಿ (ಎಸ್.ಸಿ.ಡಿ.ಸಿ)ಯಿಂದ ಮಾರ್ಜಿನ್ ಹಣ ಹಾಗು ರೂ. 32,500/– ಬ್ಯಾಂಕುಗಳಿಂದ ಸಾಲವಾಗಿರುತ್ತದೆ.

2.12.3 ಈ ಯೋಜನೆಯಲ್ಲಿ ಯೋಜನಾ ವೆಚ್ಚದ ಶೇಕಡ 50ರಷ್ಟು ಸಹಾಯಧನವಾಗಿದ್ದು ಅದರ ಕನಿಷ್ಟ ಮಿತಿ ರೂ. 10,000/– ಆಗಿರುತ್ತದೆ.

2.12.4 ಹೀಗೆ ಸಹಾಯ ಧನಕ್ಕಾಗಿ ಗರಿಷ್ಠ ಯೋಜನಾ ವೆಚ್ಚ ರೂ. 50,000/– ಆಗಿರುತ್ತದೆ. ಅದರಲ್ಲಿ ರೂ. 10000/–ದ ಗರಿಷ್ಠ ಮಿತಿಯೊಂದಿಗೆ ಶೇಕಡ 50ರಷ್ಟು ಸಹಾಯ ಧನ ಮತ್ತು ಶೇಕಡ 15ರಷ್ಟು ಮಾರ್ಜಿನ್ ಹಣವಾಗಿರುತ್ತದೆ.

2.12.5 ರೂ. 6500ರವರೆಗಿನ ಸಾಲವನ್ನು ಶೇಕಡ 4 ಬಡ್ಡಿ ದರದ ಡಿ.ಆರ್.ಐ ಯೋಜನೆಯ ರೀಯಾಯಿತಿ ಸಾಲವೆಂದು ಪರಿಗಣಸಲಾಗುವುದು. ಯೋಜನೆಯ ವೆಚ್ಚ ರೂ. 6500/– ದಾಟಿದರೂ ಈ ಸೌಲಭ್ಯ ದೊರೆಯುತ್ತದೆ. ಮಂಜೂರಾದ / ವಿತರಣೆಯಾದ ಸಾಲ ರೂ. 6500/– ಮೀರಿದಲ್ಲಿ ಆ ತರಹದ ಸಾಲಗಳಿಗೆ ರಿಸರ್ವ್ ಬ್ಯಾಂಕ್‌ನ ಬಡ್ಡಿ ದರದ ಬಗ್ಗೆಯ ಆದೇಶದಂತೆ ಬಡ್ಡಿ ವಿಧಿಸಲಾಗುತ್ತದೆ.

2.12.6 ಸಾಲಗಾರ ನಿಗದಿತ ಆಸ್ತಿಯನ್ನು ಕೊಳ್ಳಲು ಸಾಧ್ಯವಾಗುವಂತೆ ಸಹಾಯ ಧನ ಮತ್ತು ಮಾರ್ಜಿನ್ ಹಣದ ಜೊತೆಗೆ ಇಡೀ ಸಾಲದ ಮೊತ್ತವನ್ನು ಆಸ್ತಿ ಗಳಿಕೆ ಸಂದರ್ಭದಲ್ಲಿ ಒಂದೇ ಕಂತಿನಲ್ಲಿ ಹಂಚುವಂತೆ ನೋಡಿಕೊಳ್ಳಬೇಕು. ಸಾಲವನ್ನು ಹಂತ ಹಂತವಾಗಿ ವಿತರಿಸುವುದಾದಲ್ಲಿ, ಶೇಕಡ 25ರಷ್ಟು ಮಂಜೂರಾದ ಸಾಲದ ಮೊತ್ತವನ್ನು ವಿತರಿಸಿದಾಗ ಸಹಾಯ ಧನ ಹಾಗೂ ಮಾರ್ಜಿನ್ ಹಣವನ್ನು ಬ್ಯಾಂಕುಗಳು ವಿತರಿಸಿರಬೇಕು.

2.12.7 **ಅರ್ಹತೆ:**

2.12.8 ಅರ್ಜಿದಾರ ಅನ್ಯಥಾ ಅರ್ಹನಾಗಿದ್ದರೆ, ಈ ಹಿಂದೆ ಆತ/ಆಕೆ ಸಹಾಯ ಧನವನ್ನೊಳಗೊಂಡ ಯಾವುದೇ ಯೋಜನೆಯಡಿ ಸಹಾಯ ಪಡೆದಿದ್ದರೂ ಆತ ಸಹಾಯಕ್ಕೆ ಅರ್ಹನಾಗಿರುತ್ತಾನೆ.

2.12.9 ಎಸ್.ಸಿ.ಡಿ.ಸಿಯು ದೊಡ್ಡ ಆರ್ಥಿಕ ಕಾರ್ಯಸಾಧ್ಯ ಯೋಜನೆಗಳನ್ನು ಕಾರ್ಯಗತಗೊಳಿಸಲು ಅನುವಾಗುವಂತೆ ಮತ್ತು ಜಾಡಮಾಲಿಗಳ ಮಧ್ಯೆ ಸ್ವಸಹಾಯ ಭಾವನೆಯನ್ನುಂಟುಮಾಡಲು 'ಗುಂಪು ಯೋಜನೆ'ಗಳಿಗೆ ಅವಕಾಶ ಮಾಡಿಕೊಡಲಾಗಿದೆ. ಎಸ್.ಸಿ.ಡಿ.ಸಿ. ಗುಂಪು ಯೋಜನೆಗಳನ್ನು ಮಾಡಬಹುದು ಮತ್ತು ಅವಕಾಶವಿರುವ ಸಹಾಯಧನ ಹಾಗು ಮಾರ್ಜಿನ್ ಹಣವನ್ನು ಒಟ್ಟುಗೂಡಿಸಬಹುದು.

2.12.10 **ಭದ್ರತೆ**

ಸಾಲದಿಂದ / ಸಹಾಯಧನದಿಂದ ಗಳಿಸಿದ ಆಸ್ತಿ ಮಾತ್ರ ಬ್ಯಾಂಕುಗಳ ಸಾಲಕ್ಕೆ ಭದ್ರತೆಯಾಗಿರುತ್ತದೆ. ಅವರ ಮಾರ್ಜಿನ್ ಹಣ ಸಾಲ ಸಹಾಯಕ್ಕೆ ಸಮ ಸಮವಾದ / 2ನೇ ಪ್ರಭಾರವನ್ನು ಈ ಆಸ್ತಿಯಮೇಲೆ ಎಸ್.ಸಿ.ಡಿ.ಸಿ. ಪಡೆಯಬಹುದು.

2.12.11 **ಮರುಪಾವತಿ**

ಮರುಪಾವತಿಯನ್ನು ಮಾಸಿಕ / ತ್ರೈಮಾಸಿಕ ಕಂತುಗಳಲ್ಲಿ 6 ತಿಂಗಳಿಗೆ ಮೀರಿದ ಹೆಚ್ಚುವರಿ ಅವಧಿ ಸೇರಿ 3 ರಿಂದ 7 ವರ್ಷಗಳವರೆಗೆ ಇರುತ್ತದೆ. ವಸೂಲಿಯನ್ನು ಮೊದಲು ಬ್ಯಾಂಕಿನ ಸಾಲಕ್ಕೆ ಜಮಾ ಮಾಡಬೇಕು. ವಸೂಲಾತಿ ಸ್ಥಿತಿಯನ್ನು ಸುಧಾರಿಸಲು ಬ್ಯಾಂಕುಗಳು ವಸೂಲಾತಿ ಅಭಿಯಾನವನ್ನು ಕೈಗೊಳ್ಳಬೇಕು ಮತ್ತು ಸಾಲಗಾರರನ್ನು ಆಗಾಗ ಭೇಟಿಯಾಗಿ ಸಾಲದ ಸಹಾಯದಿಂದ ನಿರ್ಮಿಸಿದ ಆಸ್ತಿಯನ್ನು ಸರಿಯಾಗಿ ನಿರ್ವಹಿಸುತ್ತಿರುವುದನ್ನು ಪರಿಶೀಲಿಸುತ್ತಿರಬೇಕು.

2.12.12 **ಸಾಲದ ಪಾಸ್ ಪುಸ್ತಕ**

ಸಾಲ ನೀಡಿಕೆ ಬ್ಯಾಂಕುಗಳು ಸಾಲಗಾರರಿಗೆ ಅವನ / ಅವಳ ಹೆಸರು, ವಿಳಾಸ, ದಿನಾಂಕ ಮತ್ತು ಸಾಲದ ಮೊತ್ತ, ಉದ್ದೇಶ, ಬಡ್ಡಿದರ, ಮರುಪಾವತಿ ಅವದಿ,ಹೊಂದಿದ ಸಾಲದ ಪಾಸ್‌ಪುಸ್ತಕವನ್ನು ಮರುಪಾವತಿ ಕಂತಿನ ಸಂಖ್ಯೆ ಮತ್ತು ಮೊತ್ತ, ಬೇಬಾಕಿ ಇಲ್ಲದಿದ್ದರೆ

ಪಾವತಿಸಬೇಕಾದ ಮೊತ್ತ ಮತ್ತು ಬಡ್ಡಿ ಮುಂತಾದವುಗಳನ್ನು ಹಣಕಾಸು ನೀಡುವ ಬ್ಯಾಂಕು ನೀಡುತ್ತದೆ. ಸಾಲಗಾರನಿಗೆ ನೀಡಿದ ಸಹಾಯಧನದ ಮೊತ್ತ ಮತ್ತು ವಿತರಿಸಿದ ದಿನಾಂಕವನ್ನೂ ಅದರಲ್ಲಿ ನಮೂದಿಸಬೇಕು.

**3. ಬ್ಯಾಂಕುಗಳ ಪಾತ್ರ**

3.1 ಈ ಯೋಜನೆಯ ಉದ್ದೇಶ ಗುರಿಪ್ರಧಾನವಾಗಿರದೆ ಉದ್ಯೋಗ / ಆದಾಯ ಪ್ರಧಾನವಾಗಿರಬೇಕು. ಯೋಜನೆಯ ಯಶಸ್ಸು ಪರಿಣಾಮಕಾರಿಯಾಗಿ ಪಾಲ್ಗೊಳ್ಳುವುದು ಮತ್ತು ಬ್ಯಾಂಕುಗಳು ಎಲ್ಲ ಮಟ್ಟದಲ್ಲೂ ನಿಗಾ ವಹಿಸುವುದನ್ನು ಅವಲಂಬಿಸಿದೆ. ಆದ್ದರಿಂದ ಈ ವಿಚಾರವಾಗಿ ಬ್ಯಾಂಕುಗಳು ವಿಶೇಷವಾದ ಗಮನವನ್ನು ನೀಡಬೇಕು, ಮತ್ತು ರಾಜ್ಯದ ಸ್ಥಳೀಯ ಪರಿಶಿಷ್ಟ ಜಾತಿ ಅಭಿವೃದ್ಧಿ ಮತ್ತು ಹಣಕಾಸು ಮಂಡಳಿಗಳೊಡನೆ ಸೇರಿಕೊಂಡು ಬ್ಯಾಂಕಿನ ಸಾಕಷ್ಟು ಶಾಖೆಗಳು ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುತ್ತಿರುವುದನ್ನು ಖಚಿತ ಪಡಿಸಿಕೊಳ್ಳಬೇಕು. ಈ ಯೋಜನೆಗೆ ನಿಗದಿಪಡಿಸಿದ ಒಟ್ಟು ಗುರಿಯನ್ನು ಎಸಿಪಿಯ ಕೆಳಗೆ ಬರುವ ಜಿಲ್ಲೆಗಳಿಗೆ, ಶಾಖೆಗಳ ಕಾರ್ಯಕ್ಷೇತ್ರದಲ್ಲಿ ದೊರಕುವ ಅರ್ಹ ಫಲಾನುಭವಿಗಳ ಆಧಾರದಲ್ಲಿ ಡಿಸಿಪಿ ಒಳಗೊಂಡ ಬ್ಯಾಂಕುಗಳ ಶಾಖೆಗಳ ಮಧ್ಯೆ ಸರಿಯಾದ ಪ್ರಮಾಣದಲ್ಲಿ ಬ್ಯಾಂಕುಗಳು ಗೊತ್ತುಪಡಿಸಬೇಕು. ಬ್ಯಾಂಕುಗಳು ತಮ್ಮ ಶಾಖೆಗಳಿಗೆ / ನಿಯಂತ್ರಣ ಕಚೇರಿಗಳಿಗೆ ಈ ಯೋಜನೆ ಕಾರ್ಯಗತಗೊಳಿಸಲು ಸೂಕ್ತ ಸೂಚನೆಗಳನ್ನು ನೀಡಬಹುದು.

3.2 ಫಲಾನುಭವಿ ಅರ್ಜಿದಾರನಿಗೆ ತಮ್ಮ ಶಾಖೆಗಳು ಎಲ್ಲಾ ಸಹಕಾರ ನೀಡುವುದನ್ನು ಮತ್ತು ಯೋಜನೆಯಲ್ಲಿ ಕಲ್ಪಿಸದ ದಾಖಲಾತಿ, ಖಾತರಿ ಮುಂತಾದವನ್ನು ಒತ್ತಾಯಿಸದಿರುವುದನ್ನು ಬ್ಯಾಂಕುಗಳು ಖಚಿತ ಪಡಿಸಿಕೊಳ್ಳಬೇಕು.

3.3 ನಿಶ್ಚಿತ ಠೇವಣಿಯಲ್ಲಿ ಹಣ ತೊಡಗಿಸುವಂತೆ ಫಲಾನುಭವಿಗಳನ್ನು ಬ್ಯಾಂಕುಗಳು ಬಲವಂತಪಡಿಸಬಾರದು.

3.4 ಫಲಾನುಭವಿಗಳು ಮತ್ತು ಬ್ಯಾಂಕುಗಳ ಮಧ್ಯೆ ಕಾರ್ಯನಿರ್ವಹಿಸುತ್ತಿರುವ ಮಧ್ಯವರ್ತಿಗಳನ್ನು ತೊಲಗಿಸಲು ಬ್ಯಾಂಕುಗಳು ಸರಳ ಮತ್ತು ಪಾರದರ್ಶಕ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳಬೇಕು ಮತ್ತು ಅರ್ಜಿಗಳನ್ನು ಸಕಾಲದಲ್ಲಿ ಶೀಘ್ರವಾಗಿ ವಿಲೇವಾರಿ ಮಾಡಬೇಕು.

3.5 ರೂ. 25000/– ತನಕದ ಸಾಲ ಮಿತಿಯ ಎಲ್ಲ ಅರ್ಜಿಗಳನ್ನು ಹದಿನೈದು ದಿನಗಳೊಳಗೆ ವಿಲೇವಾರಿ ಮಾಡಬೇಕು ಮತ್ತು ರೂ. 25000/–ಕ್ಕಿಂತ ಹೆಚ್ಚಿನವುಗಳನ್ನು 8 ರಿಂದ 9 ವಾರಗಳೊಳಗೆ ವಿಲೇವಾರಿ ಮಾಡಬೇಕು.

3.6 ಸ್ವೀಕೃತಿ ಮತ್ತು ವಿಲೇವಾರಿಯಾದ ಅರ್ಜಿಗಳ ಸರಿಯಾದ ದಾಖಲೆಗಳನ್ನು ಅಗತ್ಯಕ್ಕೆ ತಕ್ಕಂತೆ ನಿರ್ವಹಿಸಬೇಕು.

3.7 ಶಾಖಾ ವ್ಯವಸ್ಥಾಪಕರು ಅರ್ಜಿಗಳನ್ನು ತಿರಸ್ಕರಿಸಬಹುದು (ಎಸ್.ಸಿ / ಎಸ್.ಟಿಗಳನ್ನು ಹೊರತು ಪಡಿಸಿ), ಆದರೆ, ತರುವಾಯ ಆ ತಿರಸ್ಕೃತ ಅರ್ಜಿಗಳನ್ನು ವಿಭಾಗೀಯ / ಪ್ರಾಂತೀಯ ವ್ಯವಸ್ಥಾಪಕರು ಪರೀಕ್ಷಿಸಿರಬೇಕು. ಕ್ಷುಲ್ಲಕ ಕಾರಣಗಳಿಗೆ ಅರ್ಜಿಗಳನ್ನು ತಿರಸ್ಕರಿಸಬಾರದು. ಒಂದು ವೇಳೆ ಅರ್ಜಿಗಳನ್ನು ತಿರಸ್ಕರಿಸಬೇಕಾದಲ್ಲಿ ಅರ್ಜಿಯ ತಿರಸ್ಕಾರಕ್ಕೆ ಕಾರಣಗಳನ್ನು ತಪ್ಪದೆ ದಾಖಲಿಸಬೇಕು.

3.8 ನಿಗದಿತ ಸಮಯವನ್ನು ಮೀರಿ ವಿಲೇವಾರಿಗೆ ಬಾಕಿ ಇರುವ ಸಾಲದ ಅರ್ಜಿಗಳನ್ನು ಆದ್ಯತೆಯ ಆಧಾರದ ಮೇಲೆ ವಿಲೇವಾರಿ ಮಾಡಬೇಕು.

3.9 ಈ ಯೋಜನೆಯ ಬಗ್ಗೆ ಬ್ಯಾಂಕುಗಳ ಕಾರ್ಯಸಾಧನೆಯನ್ನು ಆಗಾಗ ಎಸ್.ಎಲ್.ಬಿ.ಸಿ. ಸಭೆಗಳಲ್ಲಿ ಲೀಡ್ ಬ್ಯಾಂಕ್ ಯೋಜನೆಯಡಿ ವಿಮರ್ಷಿಸಬೇಕು.

3.10 ಫಲಾನುಭವಿಗಳಿಗೆ ಸಾಲ ನೀಡುವುದನ್ನು ಪ್ರೋತ್ಸಾಹಿಸಲು ಬ್ಯಾಂಕ್ ಸಿಬ್ಬಂದಿಗೆ ಶಿಕ್ಷಣ ನೀಡುವ ಮೂಲಕ ಅವರ ಮನೋಭಾವವನ್ನು ಬದಲಾಯಿಸಲು ಪ್ರಯತ್ನಿಸಬೇಕು.

3.11 ಗುರಿಯನ್ನು ಮುಟ್ಟಲು ಬ್ಯಾಂಕುಗಳು ಪೂರ್ವಮಂಜೂರಾತಿ ಪರಿಶೀಲನೆ ಹಾಗೂ ಹಂಚಿಕೆ ನಂತರದ ಅನುಪಾಲನೆಯನ್ನು ಉತ್ತಮಗೊಳಿಸಬೇಕು.

3.12 ಜಿಲ್ಲಾ ವ್ಯವಸ್ಥಾಪಕರು, ಸಮಾಜ ಕಲ್ಯಾಣ ಅಧಿಕಾರಿ ಮತ್ತು ಲೀಡ್ ಬ್ಯಾಂಕಿನ ಪ್ರತಿನಿಧಿಗಳನ್ನೊಳಗೊಂಡ ಜಿಲ್ಲಾ ಮಟ್ಟದ ಒಂದು ಸಮಿತಿಯನ್ನು ಅರ್ಜಿಗಳ ವಿಲೇವಾರಿಗೆ 'ಕಲೆಕ್ಟರ್'ರ ಕೈಕೆಳಗೆ ರಚಿಸಬಹುದು. ಸಮಿತಿಯು ನಿಯತಕಾಲಿಕವಾಗಿ ಕನಿಷ್ಟ ಎರಡು ತಿಂಗಳಿಗೊಮ್ಮೆ ಭೇಟಿಯಾಗಬೇಕು.

3.13 ಯೋಜನೆಯ ಅನುಷ್ಠಾನದ ಉಸ್ತುವಾರಿಯನ್ನು ನೋಡಿಕೊಳ್ಳಲು ಮತ್ತು ಕಾರ್ಯವಿಧಾನಗಳ ತೊಡಕುಗಳನ್ನು ನಿವಾರಿಸಿ ತಾಂತ್ರಿಕ ಕಾರಣವನ್ನು ಹೊರತು ಪಡಿಸಿ ಅರ್ಜಿಗಳನ್ನು ತಿರಸ್ಕರಿಸುವುದನ್ನು ತಡೆಯಲು ಲೀಡ್ ಬ್ಯಾಂಕ್ ಮತ್ತು ಪರಿಶಿಷ್ಟ ಜಾತಿ ಅಭಿವೃದ್ಧಿ ಮಂಡಳಿಯನ್ನೊಳಗೊಂಡ ಒಂದು ಜಂಟಿ ಸಮಿತಿಯನ್ನು ರಚಿಸಬೇಕು.

## 4. ಅನುಷ್ಠಾನದ ಏಜನ್ಸಿಗಳು

### ರಾಷ್ಟ್ರ ಮಟ್ಟದಲ್ಲಿ

4.1 ಕಲ್ಯಾಣ ಸಚಿವಾಲಯ ರಾಷ್ಟ್ರೀಯ ಮಟ್ಟದಲ್ಲಿ ಅನುಷ್ಠಾನ ಮತ್ತು ನೋಡಲ್ ಏಜನ್ಸಿಯಾಗಿದೆ. ಕಲ್ಯಾಣ ಸಚಿವಾಲಯದ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಗರಾಭಿವೃದ್ಧಿ ಇಲಾಖೆ ಗ್ರಾಮೀಣಾಭಿವೃದ್ಧಿ, ಕಾರ್ಮಿಕ, ಶಿಕ್ಷಣ, ಬ್ಯಾಂಕಿಂಗ್, ಸಣ್ಣ ಕೈಗಾರಿಕೆ, ಯೋಜನಾ ಆಯೋಗ ಮತ್ತು ರಾಜ್ಯ ಸರ್ಕಾರದ ಸಚಿವಾಲಯಗಳ ಪ್ರತಿನಿಧಿಗಳು ಪ್ರತಿ ಮೂರುತಿಂಗಳಿಗೊಮ್ಮೆ ಸಭೆ ಸೇರಿ ಈ ಯೋಜನೆಯ ಅನುಷ್ಠಾನದ ಮೌಲ್ಯಮಾಪನ ಮಾಡಲು ಮತ್ತು ಸಾಮೂಹಿಕ ಕ್ರಮಗಳನ್ನು ಕೈಗೊಳ್ಳಲು ಕೇಂದ್ರೀಯ ಸಮಿತಿಯ ಮೇಲುಸ್ತುವಾರಿ ಸಮಿತಿಯನ್ನು ಕಲ್ಪಿಸಲಾಗಿದೆ. ಸಂಯೋಜನೆಯನ್ನು ಅನುಬಂಧ II ರಲ್ಲಿ ನೀಡಲಾಗಿದೆ.

### ರಾಜ್ಯ ಮಟ್ಟದಲ್ಲಿ

4.2 ರಾಜ್ಯದಲ್ಲಿನ ಪರಿಶಿಷ್ಟ ಜಾತಿಗಳ ಕಲ್ಯಾಣದ ಪ್ರಭಾರಿ ಕಾರ್ಯದರ್ಶಿಯವರು ಯೋಜನೆಯ ಅನುಷ್ಠಾನಕ್ಕೆ ಜವಾಬ್ದಾರರಾಗಿರುತ್ತಾರೆ. ಇವರು ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಇಲಾಖೆಗಳ ನಡುವೆ ಯೋಜನೆಯ ಅನುಷ್ಠಾನಕ್ಕಾಗಿ ಸಮನ್ವಯ ಸಾಧಿಸುತ್ತಾರೆ. ರಾಜ್ಯ ಮಟ್ಟದ ಪರಿಶಿಷ್ಟ ಜಾತಿಗಳ ಅಭಿವೃದ್ಧಿ ಮತ್ತು ಹಣಕಾಸು ನಿಗಮವು ಯೋಜನೆಯ ಅನುಷ್ಠಾನದ ಮುಖ್ಯ ಏಜನ್ಸಿಯಾಗಿರುತ್ತದೆ.

**ಜಿಲ್ಲಾ ಮಟ್ಟದಲ್ಲಿ**

4.3 ಜಿಲ್ಲಾ ಕಲೆಕ್ಟರ್ / ಜಿಲ್ಲಾ ದಂಡಾಧಿಕಾರಿ / ಡೆಪ್ಯೂಟಿ ಕಮಿಶನರ್‌ರವರು ಯೋಜನೆ ಒಟ್ಟಾರೆ ಅನುಷ್ಠಾನದ ಜವಾಬ್ದಾರರಾಗಿರುತ್ತಾರೆ. ಯೋಜನೆಯ ದೈನಂದಿನ ಅನುಷ್ಠಾನದ ಹೊಣೆಯನ್ನು ಜಿಲ್ಲಾ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು / ಸಹಾಯಕ ವ್ಯವಸ್ಥಾಪಕರು ಹೊತ್ತಿರುತ್ತಾರೆ.

**ಸ್ಥಳೀಯ ಸಂಸ್ಥೆ ಮಟ್ಟದಲ್ಲಿ**

4.4 100 ಅಥವಾ 100ಕ್ಕೂ ಮಿಕ್ಕಿ ಜಾಡಮಾಲಿಗಳು ಇರುವಂತಹ ಪ್ರತಿ ಪಟ್ಟಣಕ್ಕೆ, ರಾಜ್ಯ ಸರ್ಕಾರ / ಜಿಲ್ಲಾ ಕಚೇರಿ / ಜಿಲ್ಲಾ ಕಲೆಕ್ಟರುಗಳ ಒಂದು ಸಣ್ಣ ಸಮಿತಿಯನ್ನು ರಚಿಸಬೇಕು. ಸೂಕ್ತ ವ್ಯಕ್ತಿಗಳು / ಅಧಿಕಾರಿಗಳನ್ನು ಅಧ್ಯಕ್ಷರು ಮತ್ತು ಸಂಚಾಲಕರನ್ನಾಗಿ ಹೊಂದಿರುವ ಸೂಕ್ತ ಮೊಹಲ್ಲಾ ಪ್ರತಿನಿಧಿ ಸಮಿತಿಯನ್ನು ಜಿಲ್ಲಾಧಿಕಾರಿಯು ರಚಿಸಬಹುದು. ಸ್ಥಳೀಯ ಸಂಸ್ಥೆ ಮಟ್ಟದ ಸಮಿತಿ ಮತ್ತು ಮೊಹಲ್ಲಾ ಸಮಿತಿಗಳು ಜಾಡಮಾಲಿಗಳನ್ನು ಗುರುತಿಸಲು ಮತ್ತು ಮಾತುಕತೆಗೆ ಒಂದು ವೇದಿಕೆಯನ್ನು ಕಲ್ಪಿಸಲು ಅಥವಾ ಯೋಜನೆಯ ಅನುಷ್ಠಾನದಲ್ಲಿನ ದೋಷ ಸರಿಪಡಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲು ಸಹಾಯ ಮಾಡುತ್ತದೆ.

**5. ನಿಗಾವಹಿಸುವುದು ಮತ್ತು ಮೌಲ್ಯಮಾಪನ**

ರಾಷ್ಟ್ರೀಯ, ರಾಜ್ಯ, ಜಿಲ್ಲಾ ಮತ್ತು ಪಟ್ಟಣಗಳ ಮಟ್ಟಗಳಲ್ಲಿನ ಅನುಷ್ಠಾನ ಏಜನ್ಸಿಗಳು ಯೋಜನೆ ಅನುಷ್ಠಾನದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡುತ್ತವೆ ಮತ್ತು ನಿಗದಿಪಡಿಸಿದ ಗುರಿಗಳಿಗೆ ಅನುಸಾರವಾಗಿ ದೋಷನಿವಾರಣಾ ಪ್ರಕ್ರಿಯೆಯನ್ನು ಕೈಗೊಳ್ಳುತ್ತದೆ.

**5.1** ಅನುಬಂಧ III ರ ಪ್ರಕಾರ ಒಂದು ಮಾಸಿಕ ವಿವರಣಾ ಪಟ್ಟಿಯನ್ನು ಅನುಷ್ಠಾನ ಶಾಖೆಯು ಮಾರ್ಗದರ್ಶಿ ಬ್ಯಾಂಕ್ ಅಧಿಕಾರಿಗೆ (ಮಾರ್ಗದರ್ಶಿ ಬ್ಯಾಂಕುಗಳ ಶಾಖೆಗಳಾಗಿದ್ದಲ್ಲಿ) ಅಥವಾ ಜಿಲ್ಲಾ ಸಮನ್ವಯಾಧಿಕಾರಿ (ಇತರೇ ಬ್ಯಾಂಕುಗಳ ಪ್ರಕರಣಗಳಲ್ಲಿ) ಹಾಗು ತಮ್ಮ ನಿಯಂತ್ರಣಾ ಕಚೇರಿಗಳಿಗೆ ಕಳುಹಿಸಬೇಕು. ಯೋಜನೆಯಡಿ ಪ್ರತಿ ಜಿಲ್ಲೆಯ ಪ್ರತಿ ಬ್ಯಾಂಕಿನ ಸಾಧನಾ ವಿವರಗಳು ದೊರೆಯುವ ಸಲುವಾಗಿ ತಮ್ಮ ಜಿಲ್ಲೆಯಲ್ಲಿರುವ ಎಲ್ಲ ಶಾಖೆಗಳ ಸಂಬಂಧ ಇದೇ ನಮೂನೆಯಲ್ಲಿ ದತ್ತಾಂಶವನ್ನು ಸಂಬಂಧಪಟ್ಟ ಮಾರ್ಗದರ್ಶಿ ಬ್ಯಾಂಕಿನ ಅಧಿಕಾರಿ / ಜಿಲ್ಲಾ ಸಮನ್ವಯ ಅಧಿಕಾರಿ ಒಟ್ಟುಗೂಡಿಸಬೇಕು. ಜಿಲ್ಲೆಯಲ್ಲಿರುವ ತಮ್ಮ ಶಾಖೆಗಳಿಗೆ ಸಂಬಂಧಪಟ್ಟಂತೆ ಒಟ್ಟುಗೂಡಿಸಿದ ದತ್ತಾಂಶವನ್ನು ಜಿಲ್ಲಾ ಸಮನ್ವಯಾಧಿಕಾರಿಗಳು ಮಾರ್ಗದರ್ಶಿ ಬ್ಯಾಂಕಿನ ಅಧಿಕಾರಿಗೆ ಕಳುಹಿಸಬೇಕು. ಇದರಿಂದ ಪ್ರತಿ ಬ್ಯಾಂಕಿನ ದತ್ತಾಂಶವನ್ನು ಜಿಲ್ಲಾ ಸಲಹಾ ಸಮಿತಿಯ ಮುಂದೆ ಇಟ್ಟು ಪರಾಮರ್ಶಿಸಲು ಅನುಕೂಲವಾಗುತ್ತದೆ.

**5.2** ಬ್ಯಾಂಕುಗಳ ನಿಯಂತ್ರಣಾ ಕಚೇರಿಗಳು ತಮ್ಮ ಆಡಳಿತಾ ವ್ಯಾಪ್ತಿಗೆ ಒಳಪಟ್ಟ ಶಾಖೆಗಳ ದತ್ತಾಂಶಗಳನ್ನು ಒಗ್ಗೂಡಿಸಿ, ರಾಜ್ಯ ಮಟ್ಟದಲ್ಲಿ ಪ್ರಾಂತೀಯ / ಕ್ಷೇತ್ರೀಯ ಕಚೇರಿಗೆ ಅದನ್ನು

ಒದಗಿಸಬೇಕು. ರಾಜ್ಯಮಟ್ಟದ ಪ್ರಾದೇಶಿಕ ಮತ್ತು ವಲಯ ಕಚೇರಿಗಳು ತಮ್ಮ ಶಾಖೆಗಳು ಯೋಜನೆಯ ಅನುಷ್ಠಾನದಲ್ಲಿ ತೋರಿಸಿರುವ ಪ್ರಗತಿಯನ್ನು ಇಡೀ ರಾಜ್ಯಕ್ಕೆ ಅನ್ವಯಿಸುವ ರೀತಿಯಲ್ಲಿ ಪರಾಮರ್ಶಿಸಬೇಕು. ಪ್ರತಿ ಬ್ಯಾಂಕಿನ ಪ್ರಾದೇಶಿಕ / ವಲಯ ಕಚೇರಿಗಳು ರಾಜ್ಯ ಕೇಂದ್ರಾಡಳಿತ ಪ್ರದೇಶಮಟ್ಟದ ದತ್ತಾಂಶಗಳನ್ನು ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿಯ ಸಂಚಾಲಕರಿಗೆ ಎಸ್.ಎಲ್.ಬಿ.ಸಿ. ಸಭೆಗಳಲ್ಲಿ ವಿಮರ್ಶಿಸಲು ಅನುವಾಗುವಂತೆ ಸಲ್ಲಿಸಬೇಕು. ವಿವರಣಾ ಪಟ್ಟಿಯ ಒಂದು ಪ್ರತಿಯನ್ನು ಸಂಬಂಧಪಟ್ಟ ರಿಸರ್ವ್ ಬ್ಯಾಂಕಿನ ಪ್ರಾದೇಶಿಕ ಕಚೇರಿಯ ಆರ್.ಪಿ.ಸಿ.ಡಿಗೆ ಕಳುಹಿಸಲಾಗುತ್ತದೆ.

**5.3** ಬ್ಯಾಂಕುಗಳ ಪ್ರಾದೇಶಿಕ / ವಲಯ ಕಚೇರಿಗಳು, ರಾಜ್ಯ / ಕೇಂದ್ರಾಡಳಿತ ಪ್ರದೇಶವಾರು ದತ್ತಾಂಶವನ್ನು ಬ್ಯಾಂಕುಗಳ ಪ್ರಧಾನ ಕಚೇರಿಯ ವಿಮರ್ಶೆಗಾಗಿ ಕಳುಹಿಸಬೇಕು. ಅಂತಹ ವಿವರಣೆಗಳ ಆಧಾರದಮೇಲೆ ಯೋಜನೆಯಡಿಯಲ್ಲಿ ಬ್ಯಾಂಕುಗಳ ಸಾಧನೆಯನ್ನು ಕೇಂದ್ರ ಕಚೇರಿಗಳು ಪರಾಮರ್ಶಿಸಬೇಕು. ಬ್ಯಾಂಕುಗಳ ಕೇಂದ್ರ ಕಚೇರಿಗಳು ರಾಜ್ಯ / ಕೇಂದ್ರಾಡಳಿತ ಪ್ರದೇಶವಾರು ವಿವರಣೆಗಳನ್ನು ತೋರಿಸಿರುವ ಸಾಧನಾ ದತ್ತಾಂಶವನ್ನು ಸಂಬಂಧಿಸಿದ ತಿಂಗಳಿನ ತರುವಾಯ ಬರುವ ತಿಂಗಳ ಕೊನೆಯಲ್ಲಿ ಆರ್.ಪಿ.ಸಿ.ಡಿ, ಭಾರತೀಯ ರಿಸರ್ವ್ ಬ್ಯಾಂಕ್, ಕೇಂದ್ರ ಕಚೇರಿ, ಮುಂಬೈಗೆ. ಕಳಿಸತಕ್ಕದ್ದು.

**5.4** ದತ್ತಾಂಶವನ್ನು ವರದಿ ಮಾಡಲು ನಿಯಂತ್ರಣ / ಪ್ರಾಂತೀಯ / ವಲಯ / ಬ್ಯಾಂಕುಗಳ ಮುಖ್ಯ ಕಚೇರಿಗಳು ಹಾಗೂ ಎಸ್.ಎಲ್.ಬಿ.ಸಿ ಸಂಚಾಲಕರು ಅನುಬಂಧ IIIರಲ್ಲಿ ಒದಗಿಸಿದ ನಮೂನೆಯನ್ನು ಉಪಯೋಗಿಸಬಹುದು.

**ಅನುಬಂಧ I**

**ವಹಿವಾಟುಗಳ ಪಟ್ಟಿ**

ಪ್ಯಾರಾ 1.6(iii)ರ ಅನ್ವಯ

**ವ್ಯವಸಾಯ ಮತ್ತು ಸಂಬಂಧಿತ ವಲಯ**

ಎತ್ತುಗಳು ಮತ್ತು ಗಾಡಿಗಳು

ಡೀಸಲ್ ಪಂಪ್‌ಸೆಟ್ಟು ಮತ್ತು ಪೈಪ್‌ಗಳನ್ನು ಒದಗಿಸುವುದು

ಮಾವಿನ ತೋಟ

ಹಂದಿ ಸಾಕಾಣಿಕೆ

ರೇಷ್ಮೆ ಸಾಕಣೆ

ಗೋಡಂಬಿ ಸಂಸ್ಕರಣೆ

ಚಾಪೆ ಇತ್ಯಾದಿಗಳ ತಯಾರಿಕೆ

**ಸಣ್ಣ ಕೈಗಾರಿಕಾ ವಲಯ**

ಮೋಟಾರುವಾಹನಗಳ ಕಾರ್ಯಾಗಾರ

ಮುದ್ರಣಾಲಯ / ಪುಸ್ತಕ ಬೈಂಡಿಂಗ್

ಪೀಠೋಪಕರಣ ತಯಾರಿಕೆ

ಮರದ ಗಾಡಿ ತಯಾರಿಕೆ

ವಸ್ತ್ರ ಉತ್ಪನ್ನಗಳು

ಟೇಬಲ್ ಮೋಲ್ಡಿನ ಇಟ್ಟಿಗೆಗಳು

ನಾರು ಉತ್ಪನ್ನಗಳು

ಯಾಂತ್ರಿಕ ಮಗ್ಗಗಳು

ಕೈಮಗ್ಗಗಳು

ರೇಷ್ಮೆ ಎಳೆ

ಕಲ್ಲು ಕೆಲಸಗಳು

ಹೊಗೆಸೊಪ್ಪು ಹಗೇವು

ಆಟಿಕೆ ಮತ್ತು ಗೊಂಬೆ ತಯಾರಿಕೆ

ಸ್ಕ್ರೀನ್ ಪ್ರಿಂಟಿಂಗ್

**ಸೇವಾ ವಲಯ**

ಫೋಟೊ ಸ್ಟುಡಿಯೊ

ರೇಡಿಯೊ / ಟಿವಿ ಮುಂತಾದವುಗಳ ದುರಸ್ತಿ

ಕಸೂತಿ ಮತ್ತು ಕುಸುರಿ ಕೆಲಸ

ಟಯರ್ ವಲ್ಕನೈಸಿಂಗ್ ಘಟಕ

ಲೌಡ್‌ಸ್ಪೀಕರ್, ಆಂಪ್ಲಿಫೈಯರ್, ಮೈಕ್ ಇತ್ಯಾದಿ

ಬ್ಯಾಟರಿ ಚಾರ್ಜಿಂಗ್

ಫೋಟೊ ಸ್ಟುಡಿಯೊ

ರೆಫ್ರಿಜರೇಟರ್ / ಕೂಲರ್ ದುರಸ್ತಿ

ದ್ವಿಚಕ್ರ / ತ್ರಿಚಕ್ರ ವಾಹನಗಳ ಸರ್ವಿಸಿಂಗ್

ಆಟೊರಿಕ್ಷಾ

ಸೈಕಲ್ ದುರಸ್ತಿ ಅಂಗಡಿಗಳು

ಪಂಪ್ ಸೆಟ್ ದುರಸ್ತಿ

ಮರಗೆಲಸ

ಕೊಳಾಯಿ ವ್ಯವಸ್ಥೆ ಮತ್ತು ನೈರ್ಮಲ್ಯ

ಚಿಲ್ಲರೆ ಅಂಗಡಿ

ಕಮ್ಮಾರಿಕೆ

ತಗಡು ಶೀಟುಗಳ ಕೆಲಸ

ಹೊಲಿಗೆ

ಎಲೆ ಅಡಿಕೆ ಮತ್ತು ಸಿಗರೇಟು ಅಂಗಡಿ

ಜ್ಯೂಸ್ ಅಂಗಡಿ

ಹಣ್ಣು ಮತ್ತು ತರಕಾರಿ ಮಾರಾಟ

ಐಸ್ಕ್ರೀಮ್ ಮಾರಾಟ

ದಿನಪತ್ರಿಕೆ ಮತ್ತು ಮ್ಯಾಗಜೀನ್ ಅಂಗಡಿ

ಇಸ್ತ್ರಿ ಪೆಟ್ಟಿಗೆ, ಟೋಸ್ಟರ್, ಗೀಸರ್ಸ್ ಇತ್ಯಾದಿ ಗೃಹೋಪಯೋಗಿ ವಸ್ತುಗಳ ದುರಸ್ತಿ

ಪ್ಯಾಕಿಂಗ್

ಡೀಸಲ್ ಎಂಜಿನ್, ಎಲೆಕ್ಟ್ರಿಕ್ ಮೋಟರ್ ಇತ್ಯಾದಿಗಳ ದುರಸ್ತಿ

ಗಡಿಯಾರ ದುರಸ್ತಿ

ಬಾಗಿಲು, ಕಿಟಕಿ ಮತ್ತು ಗೋಡೆಗೆ ಬಣ್ಣ ಬಳಿಯುವುದು

ಗಾರೆಕೆಲಸ

ಟೈಲ್ ಹಾಸುವುದು

ಗ್ಲಾಸ್ ಅಳವಡಿಕೆ

ಆಹಾರ ಹಾಗು ತರಕಾರಿ ಸಂರಕ್ಷಣೆ

ಸಣ್ಣ ಟ್ರಾನ್ಸ್‌ಫಾರ್ಮರ್ ಮತ್ತು ಕಾಯಿಲ್ ವೈಂಡಿಂಗ್

ವೆಲ್ಡಿಂಗ್

ಲೆನ್ಸ್ ಗ್ರೈಂಡಿಂಗ್ ಮತ್ತು ಪಾಲಿಷಿಂಗ್

ಪಿಂಗಾಣಿ / ಕುಂಬಾರಿಕೆ

ಟ್ರಾನ್ಸ್‌ಫಾರ್ಮರ್ ತಯಾರಿಕೆ / ದುರಸ್ತಿ
ಕೇಬಲ್ ತಯಾರಿಕೆ

**ವ್ಯಾಪಾರ ವಲಯ**

ವಿದ್ಯುತ್ ಉಗ್ರಾಣ
ಚಿಲ್ಲರೆ ಅಂಗಡಿ
ಟೈಲ್ಸ್ ಮತ್ತು ಕಟ್ಟಡ ಸಾಮಗ್ರಿ ಅಂಗಡಿ
ಟೀ ಅಂಗಡಿಗಳು
ಮೀನು ವ್ಯಾಪಾರ
ಹಣ್ಣು / ತರಕಾರಿ ಅಂಗಡಿ
ಮೆಷಿನ್ ಅಂಗಡಿ (ಗ್ರೈಂಡಿಂಗ್ ಇನ್ನಿತರ)
ಮರಗೆಲಸ
ಪೀಠೋಪಕರಣ ತಯಾರಿಸುವುದು
ಅಲಂಕಾರ ಮತ್ತು ಗಾಜು ಕೆಲಸ
ಬೆತ್ತ ಮತ್ತು ಬಿದಿರು ಕೆಲಸ
ಸೀರೆ ಪ್ರಿಂಟಿಂಗ್
ಗೃಹೋಪಕರಣಗಳ ಫ್ಯಾಬ್ರಿಕೇಷನ್
ಸಾರಿಗೆ ಸಂಬಂಧಿ ಕೆಲಸಗಳು
ನೇಯ್ಗೆ
ಉಡುಪು ತಯಾರಿಗೆ
ಉಕ್ಕಿನ ಪೀಠೋಪಕರಣ
ವಾಷಿಂಗ್ ಪೌಡರ್ ತಯಾರಿಕೆ
ಕ್ಯಾಬಿನೆಟ್ ತಯಾರಿಕೆ
ಪ್ಲಾಸ್ಟಿಕ್ ಮೌಲ್ಡ್ ತಯಾರಿಕೆ

---

## ಅನುಬಂಧ II

### ಕೇಂದ್ರ ನಿಗಾಸಮಿತಿಯ ಸಂಯೋಜನೆ

ಪ್ಯಾರಾ 4.1ರ ಅನ್ವಯ

**ಕೇಂದ್ರ ನಿಗಾಸಮಿತಿಯ ಸಂಯೋಜನೆ ಈ ಕೆಳಕಂಡಂತಿದೆ:**

| | |
|---|---|
| ಕಾರ್ಯದರ್ಶಿ, ಸಮಾಜ ಕಲ್ಯಾಣ | ಅಧ್ಯಕ್ಷರು |
| ಕಾರ್ಯದರ್ಶಿ, ನಗರಾಭಿವೃದ್ಧಿ | ಸದಸ್ಯ |
| ಕಾರ್ಯದರ್ಶಿ, ಸಣ್ಣ ಕೈಗಾರಿಕೆಗಳು | ಸದಸ್ಯ |
| ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ | ಸದಸ್ಯ |
| ಕಾರ್ಯದರ್ಶಿ, ಶಿಕ್ಷಣ ಇಲಾಖೆ | ಸದಸ್ಯ |
| ಕಾರ್ಯದರ್ಶಿ, ಬ್ಯಾಂಕಿಂಗ್ ಇಲಾಖೆ | ಸದಸ್ಯ |
| ಸಲಹಾಗಾರರು, ಯೋಜನಾ ಆಯೋಗ (ಈ ವಿಷಯದಲ್ಲಿ ವ್ಯವಹಾರಿಸುವವರು) | ಸದಸ್ಯ |
| ಸಿ.ಎಮ್.ಡಿ., ಎನ್.ಎಸ್.ಎಫ್.ಡಿ.ಸಿ | ಸದಸ್ಯ |
| ಸಚಿವಾಲಯದ ವಿತ್ತ ಸಲಹೆಗಾರರು | ಸದಸ್ಯ |
| ಪರಿಶಿಷ್ಟ ಜಾತಿ ಕಲ್ಯಾಣ ನೋಡಿಕೊಳ್ಳುವ ನಾಲ್ಕು ರಾಜ್ಯ ಸರ್ಕಾರದ ಕಾರ್ಯದರ್ಶಿಗಳು,ಸರದಿಯಂತೆ ನಾಮ ನಿರ್ದೇಶನ ಮಾಡುವುದು | ಸದಸ್ಯ (ಎಸ್.ಸಿ.ಡಿ) ಸದಸ್ಯ ಕಾರ್ಯದರ್ಶಿ |

**ಟಿಪ್ಪಣಿಗಳು:**

ದತ್ತಾಂಶ ವರದಿ ನಮೂನೆ – i. ಕಾರ್ಯಗತಗೊಳಿಸುವ ಬ್ಯಾಂಕ್ ಶಾಖೆಗಳಿಂದ, ತಮ್ಮ ನಿಯಂತ್ರಣ ಕಚೇರಿಗಳಿಗೆ/ ಸಂಬಂಧಿತ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಅಧಿಕಾರಿಗಳಿಗೆ / ಜಿಲ್ಲಾ ಸಮನ್ವಯ ಅಧಿಕಾರಿಗಳಿಗೆ ii. ನಿಯಂತ್ರಣ ಕಚೇರಿಗಳಿಂದ ಅವುಗಳ ರಾಜ್ಯ ಮಟ್ಟದ ಪ್ರಾಂತೀಯ / ಕ್ಷೇತ್ರೀಯ ಕಚೇರಿಗಳಿಗೆ iii. ಪ್ರಾಂತೀಯ / ಕ್ಷೇತ್ರೀಯ ಕಚೇರಿಗಳಿಂದ ಅವುಗಳ ಮುಖ್ಯ ಕಚೇರಿಗಳು / ಎಸ್.ಎಲ್.ಬಿ.ಸಿ. ಸಂಚಾಲಕರು / ಗ್ರಾಮೀಣ ಯೋಜನೆ ಮತ್ತು ಉದ್ದರಿ ಇಲಾಖೆಯ ಪ್ರಾಂತೀಯ ಕಚೇರಿಗಳು(ಅರ್.ಬಿ.ಐ) ಮತ್ತು iv. ಬ್ಯಾಂಕುಗಳ ಮುಖ್ಯ ಕಚೇರಿಗಳಿಂದ ಗ್ರಾಮೀಣ ಯೋಜನೆ ಮತ್ತು ಉದ್ದರಿ ಇಲಾಖೆ, ಅರ್.ಬಿ.ಐ ಕೇಂದ್ರ ಕಚೇರಿ, ಮುಂಬೈ

ಈ ವರದಿ ನಮೂನೆಯಲ್ಲಿ ದತ್ತಾಂಶವನ್ನು ಬ್ಯಾಂಕುಗಳ ನಿಯಂತ್ರಣಾ ಕಚೇರಿಗಳು ತಮ್ಮ ರಾಜ್ಯ / ಕೇಂದ್ರಾಡಳಿತ ಮಟ್ಟದ ಪ್ರಾಂತೀಯ / ಕ್ಷೇತ್ರೀಯ ಮಟ್ಟದ ಕಚೇರಿಗಳಿಗೆ ನೀಡುತ್ತವೆ; ರಾಜ್ಯವಾರು ಸ್ಥಿತಿಯನ್ನು ಪ್ರಾಂತೀಯ / ಕ್ಷೇತ್ರೀಯ ಕಚೇರಿಗಳು ತಮ್ಮ ಕೇಂದ್ರ ಕಚೇರಿಗಳಿಗೆ, ಅದೇ ವೇಳೆ ಪ್ರತಿ ರಾಜ್ಯ / ಕೇಂದ್ರಾಡಳಿತ ಪ್ರದೇಶದ ಜಿಲ್ಲಾವಾರು ಸ್ಥಿತಿಯನ್ನು ಅವುಗಳು ಎಸ್.ಎಲ್.ಬಿ.ಸಿ ಸಂಚಾಲಕರು ಮತ್ತು ಆರ್.ಬಿ.ಐ, ಗ್ರಾಮೀಣ ಯೋಜನೆ ಮತ್ತು ಉದ್ದರಿ ಇಲಾಖೆ ಪ್ರಾಂತೀಯ ಕಚೇರಿಗಳಿಗೆ ಪೂರೈಸಬೇಕು.

ವರದಿಯನ್ನು ಪ್ರಾಮಾಣಿಕವಾಗಿ ಸಂಕಲಿಸಿ / ಕ್ರಮಬದ್ಧವಾಗಿ ಕ್ರೋಢೀಕರಿಸಿ ಆಯಾ ಸ್ವೀಕೃತಿದಾರರಿಗೆ ಕೆಳಗೆ ಹೇಳಿರುವ ಮಿತಿಯೊಳಗೆ ಒದಗಿಸಬೇಕು.

**ನೀಡಲಾದ ಗರಿಷ್ಠ ಸಮಯ**

ಎ. ಶಾಖಾ ನಿಯಂತ್ರಣಾ ಕಚೇರಿಗಳು / ಎಲ್.ಬಿ.ಸಿ./ಜಿಲ್ಲಾ ಸಮನ್ವಯ ಅಧಿಕಾರಿಗಳು – ತಿಂಗಳ ಅಂತ್ಯದಿಂದ 7 ದಿನಗಳು.

ಬಿ. ನಿಯಂತ್ರಣಾ ಕಚೇರಿ ಮತ್ತು ಜಿಲ್ಲಾ ಸಮನ್ವಯ ಅಧಿಕಾರಿಗಳು ಪ್ರಾಂತೀಯ / ಕ್ಷೇತ್ರೀಯ ಕಚೇರಿ/ ಎಲ್.ಬಿ.ಒ – ತಿಂಗಳ ಅಂತ್ಯದಿಂದ 15 ದಿನಗಳು

ಸಿ. ಪ್ರಾಂತೀಯ / ಕ್ಷೇತ್ರೀಯ ಕಚೇರಿ ಎಸ್.ಎಲ್.ಬಿ.ಸಿ. ಸಂಚಾಲಕರು / ಕೇಂದ್ರ ಕಚೇರಿ /ಪ್ರಾಂತೀಯ ಕಚೇರಿ, ಗ್ರಾಮೀಣ ಯೋಜನೆ ಮತ್ತು ಉದ್ದರಿ ಇಲಾಖೆ – ತ್ರೈಮಾಸಿಕಾಂತ್ಯದಿಂದ 20 ದಿನಗಳು

ಡಿ. ಬ್ಯಾಂಕುಗಳ ಕೇಂದ್ರ ಕಚೇರಿಗಳು, ಗ್ರಾಮೀಣ ಯೋಜನೆ ಮತ್ತು ಉದ್ದರಿ ಇಲಾಖೆ, ಭಾರತೀಯ ರಿಸರ್ವ್ ಬ್ಯಾಂಕ್ ಕೇಂದ್ರ ಕಚೇರಿ – ದತ್ತಾಂಶ ಸಂಬಂಧಿಸಿದ ತಿಂಗಳ ನಂತರದ ತಿಂಗಳ ಅಂತ್ಯದೊಳಗೆ.

---

## ಅನುಬಂಧ III

## ಎಸ್.ಎಲ್.ಆರ್.ಎಸ್.ನಂತೆ ಮಾಸಿಕ ಪ್ರಗತಿ ವರದಿ

ಎಸ್.ಎಲ್.ಆರ್.ಎಸ್ ನಂತೆ ವಸೂಲಾತಿ ಸ್ಥಿತಿ – ಕೊನೆಗೊಂಡ ಅರ್ಧವಾರ್ಷಿಕ / ವಾರ್ಷಿಕ

-----------------------

## ಅನುಬಂಧ IV

## ಜಾಡಮಾಲಿಗಳ ವಿಮೋಚನೆ ಮತ್ತು ಪುನರ್ವಸತಿ ಯೋಜನೆ (ಎಸ್.ಎಲ್.ಆರ್.ಎಸ್)

## ಒಗ್ಗೂಡಿಸಿದ ಸುತ್ತೋಲೆಗಳ ಯಾದಿ

| ಕ್ರ. ಸಂ | ಸುತ್ತೋಲೆ ಸಂಖ್ಯೆ | ದಿನಾಂಕ | ವಿಷಯ |
|---|---|---|---|
| **1.** | ಆರ್.ಪಿ.ಸಿ.ಡಿ. ನಂ.ಎಸ್‌ಪಿ. ಬಿಸಿ. **84** ಸಿ.**665**(ಎಸ್‌ಆರ್‌ಎಸ್)/**92–93** | **20.03.93** | ಜಾಡಮಾಲಿಗಳ ವಿಮೋಚನೆ ಮತ್ತು ಪುನರ್ವಸತಿ ಯೋಜನೆ (ಎಸ್.ಎಲ್.ಆರ್.ಎಸ್) |
| **2.** | ಆರ್.ಪಿ.ಸಿ.ಡಿ. ನಂ.ಎಸ್‌ಪಿ.ಬಿಸಿ.**136/09.02.01/93–94** | **11.05.94** | ಜಾಡಮಾಲಿಗಳ ವಿಮೋಚನೆ ಮತ್ತು ಪುನರ್ವಸತಿ ಯೋಜನೆ (ಎಸ್.ಎಲ್.ಆರ್.ಎಸ್) |
| **3.** | ಆರ್.ಪಿ.ಸಿ.ಡಿ. ನಂ.ಎಸ್‌ಪಿ.ಬಿಸಿ.**161/09.03.01/93–94** | **09.06.94** | ಜಾಡಮಾಲಿಗಳ ವಿಮೋಚನೆ ಮತ್ತು ಪುನರ್ವಸತಿ ಯೋಜನೆ (ಎಸ್.ಎಲ್.ಆರ್.ಎಸ್) |
| **4.** | ಆರ್.ಪಿ.ಸಿ.ಡಿ. ನಂ.ಎಸ್‌ಪಿ.ಬಿಸಿ.**160/09.03.01/93–94** | **29.05.95** | ಜಾಡಮಾಲಿಗಳ ವಿಮೋಚನೆ ಮತ್ತು ಪುನರ್ವಸತಿ ಯೋಜನೆ (ಎಸ್.ಎಲ್.ಆರ್.ಎಸ್) |
| **5.** | ಆರ್.ಪಿ.ಸಿ.ಡಿ. ನಂ.ಎಸ್‌ಪಿ.ಬಿಸಿ.**20/09.03.01/96–97** | **05.08.96** | ಜಾಡಮಾಲಿಗಳ ವಿಮೋಚನೆ ಮತ್ತು ಪುನರ್ವಸತಿ ಯೋಜನೆ (ಎಸ್.ಎಲ್.ಆರ್.ಎಸ್) |
| **6.** | ಆರ್.ಪಿ.ಸಿ.ಡಿ. ನಂ.ಎಸ್‌ಪಿ.ಬಿಸಿ.**157/09.03.01/96–97** | **30.06.97** | ಜಾಡಮಾಲಿಗಳ ವಿಮೋಚನೆ ಮತ್ತು ಪುನರ್ವಸತಿ ಯೋಜನೆ (ಎಸ್.ಎಲ್.ಆರ್.ಎಸ್) |
| **7.** | ಆರ್.ಪಿ.ಸಿ.ಡಿ. ನಂ.ಎಸ್‌ಪಿ.ಬಿಸಿ.**16/09.03.01/97–98** | **01.08.97** | ಜಾಡಮಾಲಿಗಳ ವಿಮೋಚನೆ ಮತ್ತು ಪುನರ್ವಸತಿ ಯೋಜನೆ (ಎಸ್.ಎಲ್.ಆರ್.ಎಸ್) |
| **8.** | ಆರ್.ಪಿ.ಸಿ.ಡಿ. ನಂ.ಎಸ್‌ಪಿ.ಬಿಸಿ.**109/09.03.01/97–98** | **20.04.98** | ಎಸ್.ಎಲ್.ಆರ್.ಎಸ್ ಬಗ್ಗೆ ಕ್ಷಿಪ್ರ ಅಧ್ಯಯನ |
| **9.** | ಆರ್.ಪಿ.ಸಿ.ಡಿ. ನಂ.ಎಸ್‌ಪಿ.ಬಿಸಿ.**12/09.03.01/2003-04** | **25.07.03** | ಸಫಾಯಿ ಕರ್ಮಚಾರಿಗಳ ಬಗ್ಗೆ ರಾಷ್ಟ್ರೀಯ ಮಂಡಳಿಯ ಶಿಫಾರಸ್ಸುಗಳು(5ನೇ ರಿಪೋರ್ಟ್ **2001–02** |
| **10.** | ಆರ್.ಪಿ.ಸಿ.ಡಿ. ನಂ.ಎಸ್‌ಪಿ.ಬಿಸಿ.**22/02.01.01/2003-04** | **12.09.03** | ಸಾರ್ವಜನಿಕ ವಲಯ ಬ್ಯಾಂಕುಗಳ ಪರಿಣಾಮಕಾರಿ ಭಾಗವಹಿಸುವಿಕೆ |
| **11.** | ಆರ್.ಪಿ.ಸಿ.ಡಿ. ನಂ.ಎಸ್‌ಪಿ.ಬಿಸಿ.**72/09.01.01/2003-04** | **25.03.04** | ಸರ್ಕಾರಿ ನಿಯೋಜಿತ ಯೋಜನೆಗಳ ಅಡಿಯಲ್ಲಿ ಪ್ರಗತಿ ವರದಿ ಒಪ್ಪಿಸುವಿಕೆ – ಎಸ್.ಎಲ್.ಆರ್.ಎಸ್ ಅಡಿಯಲ್ಲಿ ರಿಟರ್ನ್ ಸಲ್ಲಿಕೆಯ ಅವಧಿಯಲ್ಲಿ ಬದಲಾವಣೆ |